IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ತುಳುವರ ಆರಾಧನಾ ರಂಗದಲ್ಲಿ ದೈವಾರಾಧನೆಯ ಮಹತ್ವ

[1]**Mrs. Rathnamala**

Assistant Professor

Govt First Grade College & Centre For P.G Studies, Thenkanidiyur, Udupi, India

**Abstract:** ಒಂದು ರಾಜ್ಯ ಅಥವಾ ದೇಶ ಕಟ್ಟುವ ಕಾರ್ಯದಲ್ಲಿ ಕಂಡು ಬರುವ ಬಹುಮುಖ್ಯ ಅಂಶವೆಂದರೆ ಆ ರಾಜ್ಯ ಅಥವಾ ದೇಶದ ಗಡಿಗಳನ್ನು ಗುರುತಿಸುವುದು. ಏಕೆಂದರೆ ಆ ಎಲ್ಲೆಗಳು ಆಯಾ ದೇಶ ಅಥವಾ ರಾಜ್ಯದ ಸ್ವತಂತ್ರ ಅಸ್ತಿತ್ವದ ಗುರುತುಗಳು. ಪ್ರಾಕೃತಿಕವಾಗಿ, ಪೌರಾಣಿಕವಾಗಿ, ಭಾಷಿಕವಾಗಿ, ರಾಜಕೀಯವಾಗಿ ತುಳುನಾಡು ವಿಭಿನ್ನ ಮೇರೆಗಳನ್ನು ಹೊಂದಿದೆ. ಪಂಚ ದ್ರಾವಿಡ ಭಾಷೆಗಳಲ್ಲಿ ಒಂದಾದ ತುಳು ತುಳುನಾಡಿನಲ್ಲಿ ಅಸ್ತಿತ್ವದಲ್ಲಿದೆ. ತುಳುನಾಡಿನ ಮೌಖಿಕ ಕಥನಗಳಾದ ಪಾಡ್ದನಗಳೂ ತುಳುನಾಡಿನ ಮೇರೆಗಳನ್ನು ಉಲ್ಲೇಖಿಸಿವೆ. ತುಳುನಾಡಿನ ಮೂಲ ನಿವಾಸಿಗಳ ಆಚಾರ ವಿಚಾರ ಸಂಸ್ಕೃತಿಯನ್ನು ಆಧರಿಸಿದ ಜಾನಪದ ಹಿನ್ನಲೆಯ ಅಧ್ಯಯನಕೆ ತನ್ನದೇ ಆದ ಮಹತ್ವವಿದೆ. ತುಳು ಭಾಷೆಯು ಜನಪದ ಲೋಕದಲ್ಲಿ ತನ್ನದೇ ಆದಂತಹ ಮಹತ್ತರವಾದ ಕೊಡುಗೆಯನ್ನು ನೀಡುತ್ತಾ ಬಂದಿದೆ. ತುಳುನಾಡಿನ ಮೂಲ ನಿವಾಸಿಗಳು ದೈವಾರಾಧಕರು ಮತ್ತು ನಾಗಾರಾಧಕರಾಗಿದ್ದರು. ಇವರ ಆರಾಧನಾ ಕ್ರಮವನ್ನು ಅವಲೋಕಿಸುವಾಗ ಒಂದು ರೀತಿಯ ಪ್ರಕೃತಿ ಆರಾಧಕರಾಗಿಯೂ ಕಂಡುಬರುತ್ತಾರೆ. ಇಲ್ಲಿಯ ಆರಾಧನೆಯ ಬಹುದೊಡ್ಡ ಗುರುತೆಂದರೆ ಅದು ಒಂದು ತಂಬಿಗೆ ನೀರು. ನೀರೇ ಇಲ್ಲಿಯ ನಿಧಿ. ಆ ನೀರ ಗುರುತಾದ ನಾಗ ಇಲ್ಲಿನ ಎಲ್ಲ ಆಚರಣೆಗಳ ಕೊಂಡಿಯಾಗಿದೆ.

**Index Terms - ಪ್ರಜಾಸತ್ತಾತ್ಮಕ ಆಶಯ, ಸಂಸ್ಕೃತಿ, ಅಸ್ತಿತ್ವ , ಅವಿಭಕ್ತ ಕುಟುಂಬ, ಅಗೋಚರ ತಂತ್ರ**

ಒಂದು ರಾಜ್ಯ ಅಥವಾ ದೇಶ ಕಟ್ಟುವ ಕಾರ್ಯದಲ್ಲಿ ಕಂಡು ಬರುವ ಬಹುಮುಖ್ಯ ಅಂಶವೆಂದರೆ ಆ ರಾಜ್ಯ ಅಥವಾ ದೇಶದ ಗಡಿಗಳನ್ನು ಗುರುತಿಸುವುದು. ಏಕೆಂದರೆ ಆ ಎಲ್ಲೆಗಳು ಆಯಾ ದೇಶ ಅಥವಾ ರಾಜ್ಯದ ಸ್ವತಂತ್ರ ಅಸ್ತಿತ್ವದ ಗುರುತುಗಳು. ಈ ಎಲ್ಲೆಗಳು ರಾಜಪ್ರಭುತ್ವದಡಿಯಲ್ಲಿ ಕಾಲಕಾಲಕ್ಕೆ ಹಿಗ್ಗುವ ಕುಗ್ಗುವ ಪ್ರಕ್ರಿಯೆಗೆ ಒಳಗಾಗುತ್ತಿರುತ್ತವೆ. ತುಳುನಾಡಿನ ಮೇರೆಗಳೂ ಇದಕ್ಕೆ ಹೊರತಲ್ಲ. ಪ್ರಾಕೃತಿಕವಾಗಿ, ಪೌರಾಣಿಕವಾಗಿ, ಭಾಷಿಕವಾಗಿ, ರಾಜಕೀಯವಾಗಿ ತುಳುನಾಡು ವಿಭಿನ್ನ ಮೇರೆಗಳನ್ನು ಹೊಂದಿದೆ. ಪಂಚ ದ್ರಾವಿಡ ಭಾಷೆಗಳಲ್ಲಿ ಒಂದಾದ ತುಳು ತುಳುನಾಡಿನಲ್ಲಿ ಅಸ್ತಿತ್ವದಲ್ಲಿದೆ ಅಂದ ಮಾತ್ರಕ್ಕೆ ತುಳುಭಾಷೆಯನ್ನಾಡುವ ನಾಡು ತುಳುನಾಡು ಎಂದು ಹೇಳುವಂತಿಲ್ಲ. ಏಕೆಂದರೆ ಭಾಷೆಯ ಮೇಲೆ ಹೆಸರುಗೊಂಡ ಒಂದು ದೇಶವೂ ಪ್ರಪಂಚದಲ್ಲಿ ದೊರೆಯಲಾರವು. ಜನಾಂಗದಿಂದ ಭಾಷೆಗೆ ಹೆಸರುಂಟಾಗಬಹುದು ಅಥವಾ ದೇಶದಿಂದ ಭಾಷೆಯು ಹೆಸರನ್ನು ಪಡೆಯಬಹುದು. ಆದ ಕಾರಣ ತುಳು ಭಾಷೆಯ ಕಾರಣದಿಂದಾಗಿ ತುಳುನಾಡು ಎಂಬ ಹೆಸರು ಬಂದಿದೆ ಎಂದು ವಾದಿಸಿದರೆ ತಪ್ಪಾಗುತ್ತದೆ.

ತುಳುನಾಡಿನ ಮೌಖಿಕ ಕಥನಗಳಾದ ಪಾಡ್ದನಗಳೂ ತುಳುನಾಡಿನ ಮೇರೆಗಳನ್ನು ಉಲ್ಲೇಖಿಸಿವೆ. ಲೆಕ್ಕೆಸಿರಿ ಪಾಡ್ದನವು "ಬಡಗು ಅಂಕೋಲೆಯಿಂದ ತೆಂಕು ರಾಮೇಶ್ವರ, ಮೂಡುಘಟ್ಟ, ಪಡುಸಮುದ್ರ" ಎಂದು ಹೇಳುತ್ತದೆ. ಉತ್ತರಕ್ಕೆ ಗಂಗೊಳ್ಳಿ ಹೊಳೆ, ದಕ್ಷಿಣಕ್ಕೆ ಮಲಯಾಳ, ಪೂರ್ವಕ್ಕೆ ಘಟ್ಟ ಹಾಗೂ ಪಶ್ಚಿಮಕ್ಕೆ ಸಮುದ್ರ ತುಳುನಾಡಿನ ಮೇರೆಗಳು ಎಂಬ ಮಾಹಿತಿಯನ್ನು ಪಾಡ್ದನಗಳು ನೀಡುತ್ತವೆ. ಬಡಗು ಅಥವಾ ಉತ್ತರದ ಎಲ್ಲೆಯ ವಿಚಾರ ಬಂದಾಗ ಮೌಖಿಕ ಸಾಹಿತ್ಯದಲ್ಲೂ ಖಚಿತತೆ ಕಂಡು ಬರುವುದಿಲ್ಲ. ತುಳುನಾಡಿನ ಮೂಲ ನಿವಾಸಿಗಳ ಆಚಾರ ವಿಚಾರ ಸಂಸ್ಕೃತಿಯನ್ನು ಆಧರಿಸಿದ ಜಾನಪದ ಹಿನ್ನೆಲೆಯ ಅಧ್ಯಯನಕೆ ತನ್ನದೇ ಆದ ಮಹತ್ವವಿದೆ. ತುಳು ಭಾಷೆಯು ಜನಪದ ಲೋಕದಲ್ಲಿ ತನ್ನದೇ ಆದಂತಹ ಮಹತ್ತರವಾದ ಕೊಡುಗೆಯನ್ನು ನೀಡುತ್ತಾ ಬಂದಿದೆ. ಕಬಿತೆ, ಉರಲ್, ಪಾಡ್ದನ, ಗಾದೆ, ಒಗಟು, ಕಟ್ಟುಕತೆ, ಆಚರಣೆಗಳು, ನಂಬಿಕೆಗಳು, ಕ್ರೀಡೆಗಳು ವಿಶಿಷ್ಟವಾಗಿದ್ದು ಹೊಸದೊಂದು ಬಗೆಯ ಛಾಪು ಮೂಡಿಸಿದೆ ಎಂದು ಹೇಳಿದರೆ ತಪ್ಪಾಗಲಾರದು. ತುಳು ಭೂಮಿಯಲ್ಲಿ ಜಾನಪದ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅಧ್ಯಯನ ಯೋಗ್ಯವಿಷಯಗಳು ಪ್ರತಿಯೊಂದು ಊರಿನ ಬಿರುಕು, ಕೇರಿ ಗುಡ್ಡೆಗಳಲ್ಲಿ, ನಾಗ ಮೂಲಗಳು, ಬ್ರಹ್ಮ ಸ್ಥಾನಗಳು ಸಂಶೋಧಕರನ್ನು ಕೈಬೀಸಿ ಕರೆಯುತ್ತಿವೆ. ತುಳುನಾಡಿನ ಮೂಲ ನಿವಾಸಿಗಳು ದೈವಾರಾಧಕರು ಮತ್ತು ನಾಗಾರಾಧಕರಾಗಿದ್ದರು. ಇವರ ಆರಾಧನಾ ಕ್ರಮವನ್ನು ಅವಲೋಕಿಸುವಾಗ ಒಂದು ರೀತಿಯ ಪ್ರಕೃತಿ ಆರಾಧಕರಾಗಿಯೂ ಕಂಡುಬರುತ್ತಾರೆ. ಈ ಪ್ರಕೃತಿ ಆರಾಧನೆಯು ಕಲ್ಲು, ಮರಗಿಡ, ಪ್ರಾಣಿಪಕ್ಷಿ, ಕೃಷಿಸಾಧನಗಳನ್ನು ಸಹಜರೂಪದಲ್ಲಿಯೇ ಆರಾಧಿಸಿಕೊಂಡು ಬರುವ ಪದ್ಧತಿಗಳಾಗಿದ್ದವು.

ಇಲ್ಲಿನ ನಾಗಬನ, ಬೆರ್ಮೆರಸ್ಥಾನ, ಆಲಡೆ, ಗರೋಡಿ, ದೈವದ ಮನೆಗಳಂತಹ ಆರಾಧನಾ ಕೇಂದ್ರಗಳೆಲ್ಲವೂ ನಿಸರ್ಗದ ಸಹಜತೆಯ ಜೊತೆಗೆ ಅತ್ಯಂತ ಆಪ್ತ ಸಂಬಂಧವನ್ನು ತೋರಿಸಿವೆ. ಈ ನಿಸರ್ಗ ಸಹಜ ಸ್ವರೂಪದ ಈ ಆರಾಧನಾ ಪದ್ಧತಿ ವೈದಿಕ ಚಹರೆಗಳಿಗಿಂತ ಭಿನ್ನವಾಗಿಯೇ ಇದೆ. ನೆಲಮೂಲದ ಈ ಆಚರಣೆ, ನಂಬಿಕೆಗಳಲ್ಲಿ ದಟ್ಟವಾದ ಅವೈದಿಕತೆಯಿದೆ. ಇಲ್ಲಿ ಅಗ್ನಿಗಿಂತ ನೀರು ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ. ನೀರನ್ನು ಹೊತ್ತು ಪೂಜಿಸುವ, ನೀರನ್ನೇ ತುಂಬಿಟ್ಟು ಪೂಜಿಸುವ ಈ ಆರಾಧನಾ ಪದ್ಧತಿಯಲ್ಲಿ ಅನೇಕ ಕಡೆ

ಕೆಂಡಸೇವೆಯಂತಹ ಬೆಂಕಿಯನ್ನು ಕಾಲಲ್ಲಿ ತುಳಿಯುವ ಆಚರಣೆಗಳಿವೆ. ಇಲ್ಲಿಯ ಆರಾಧನೆಯ ಬಹುದೊಡ್ಡ ಗುರುತೆಂದರೆ ಅದು ಒಂದು ತಂಬಿಗೆ ನೀರು. ನೀರೇ ಇಲ್ಲಿಯ ನಿಧಿ. ಆ ನೀರ ಗುರುತಾದ ನಾಗ ಇಲ್ಲಿನ ಎಲ್ಲ ಆಚರಣೆಗಳ ಕೊಂಡಿ.

ಪ್ರಾಚೀನ ಕಾಲದಲ್ಲಿ 'ಭೂತಾರಾಧನೆ' ಎಂದು ತುಳುನಾಡಿನಲ್ಲಿ ಪ್ರಚಲಿತದಲ್ಲಿದ್ದ ಒಂದು ವಿಶಿಷ್ಟ ಆರಾಧನಾ ಪರಂಪರೆಯು ಇಂದು ಬದಲಾದ ಕಾಲಘಟ್ಟದಲ್ಲಿ 'ದೈವಾರಾಧನೆ' ಎಂಬ ಹೊಸ ಹೆಸರನ್ನು ಪಡೆದುಕೊಂಡು ಆಚರಣೆಯಲ್ಲಿದೆ. ಈ ಕುರಿತು ತುಳವರಲ್ಲಿ ಜಿಜ್ಞಾಸೆಗಳು ನಡೆಯುತ್ತಿವೆ. ತುಳುವರ ಅವಿಭಕ್ತ ಕುಟುಂಬ ಪದ್ಧತಿ ಹಾಗೂ ಗ್ರಾಮೀಣ ಬದುಕಿನ ಪ್ರೇರಕ ಶಕ್ತಿಯೇ ಇಲ್ಲಿನ ದೈವಾರಾಧನೆ. ಗ್ರಾಮಕ್ಕೊಂದು ಗ್ರಾಮ ದೈವ, ಗ್ರಾಮದ ಗಡಿಯಲ್ಲಿ ಗಡುವಾಡು ಸ್ಥಾನದ ಕಟ್ಟುಕಾವಲಿನ ಶಕ್ತಿಗಳು, ಜಾತಿ ಜನಾಂಗಗಳನ್ನು ಒಂದುಗೂಡಿಸುವ ಗರೋಡಿ, ಬಬ್ಬುಸ್ಥಾನ, ಮುಗೇರ ಕಳ, ತರವಾಡು ಮನೆಗಳು, ಊರ ಆಡಳಿತ ಹಿಡಿದ ಬೀಡು, ಗುತ್ತುಗಳಲ್ಲಿ ಪಟ್ಟದ ದೈವಗಳು, ಗ್ರಾಮ ದೇವರ ಅಂಗಣದಲ್ಲಿ ಪರಿವಾರ ಶಕ್ತಿಗಳು, ಸೀಮೆಯ ಅಧಿಕಾರ ಪಡೆದ ಪ್ರಚಂಡ ರಾಜನ್ ದೈವಗಳು ಇವೆಲ್ಲವೂ ತುಳುನಾಡಿನ ರಕ್ಷಾಕವಚದಂತಿದ್ದು, ಈ ರಕ್ಷಾಕವಚಕ್ಕೆ ಧಕ್ಕೆಯಾದಲ್ಲಿ ತೌಳವ ಸಂಸ್ಕೃತಿ ಸೂತ್ರವೇ ಇಲ್ಲದ ಗಾಳಿಪಟದಂತಾಗುತ್ತದೆ.

ತುಳುವರು ಆರಾಧಿಸಿಕೊಂಡು ಬರುತ್ತಿರುವ ಈ ಭೂತಗಳನ್ನು ಪ್ರಾಣಿಮೂಲದ ಭೂತಗಳು, ಮಾನವ ಮೂಲದ ಭೂತಗಳು ಹಾಗೂ ಪುರಾಣಲೋಕದ ಭೂತಗಳೆಂದು ವರ್ಗೀಕರಿಸಬಹುದು. ಮಾನವ ಮೂಲದ ಭೂತಗಳಲ್ಲಿ ಹೆಚ್ಚಿನವು ಮೇಲ್ವರ್ಗದವರಿಂದ ಶೋಷಣೆಗೆ ಒಳಗಾದ ತಳಸಮುದಾಯದ ವ್ಯಕ್ತಿಗಳು ಜೋಗದಿಂದ ಮಾಯಕ್ಕೆ ಸಂದ ಸಂದರ್ಭದಲ್ಲಿ ತಮ್ಮ ಕಾರಣಿಕ ಪವಾಡಗಳಿಂದ ದೈವತ್ವಕ್ಕೆ ಏರಿದವುಗಳು. ಈ ಎಲ್ಲಾ ಶಕ್ತಿಗಳನ್ನು ನಮ್ಮ ತುಳುವರು ದೈವಾಂಶ ಶಕ್ತಿಗಳೆಂದು ಆರಾಧಿಸುತ್ತಾರೆ. ಈ ಶಕ್ತಿಗಳು ನಂಬಿದವರಿಗೆ ಕೆಡುಕನ್ನು ಮಾಡದೆ ಒಳಿತನ್ನು ಮಾಡುವ ಅಭಯಪ್ರದಾನ ಶಕ್ತಿಗಳೆಂದು ತಲೆತಲಾಂತರಗಳಿಂದ ಇವುಗಳನ್ನು ನಂಬಿಕೊಂಡು ಪೂಜಿಸಿಕೊಂಡು ಬರುತ್ತಿದ್ದಾರೆ. ಪ್ರಾಚೀನ ಕಾಲದಿಂದ ಹಿಡಿದು ಇಂದಿನವರೆಗೂ ತುಳುನಾಡಿನ ಜನರ ಧಾರ್ಮಿಕ, ಸಾಂಸ್ಕೃತಿಕ ಹಾಗೂ ವೃತ್ತಿ ಬದುಕಿನ ಜೀವನದಲ್ಲಿ ದೈವಾರಾಧನೆಯು ಮಹತ್ವದ ಪಾತ್ರವನ್ನು ವಹಿಸಿಕೊಂಡಿದೆ. ಈ ಆರಾಧನಾ ಪರಂಪರೆಯು ಧಾರ್ಮಿಕತೆಯ ರಂಗಭೂಮಿಯೂ ಆಗಿದೆ. ಆರಾಧನೆಯಲ್ಲಿರುವ ಕಲಾತ್ಮಕಾಂಶ, ಸಾಮಾಜಿಕಾಂಶ, ಮನೋರಂಜನಾಂಶ, ನ್ಯಾಯ ವಿತರಣಾಂಶ ಇತ್ಯಾದಿ ಅಂಶಗಳು ಇಂದು ಒಂದು ಸಂಕೀರ್ಣ ವ್ಯವಸ್ಥೆಯಾಗಿ ಬೆಳೆದು ಬಂದಿದೆ.

ದೈವಾರಾಧನೆ ಎಂಬುವುದು ಒಂದು ಕುಟುಂಬ ಹಾಗೂ ಒಂದು ಪ್ರದೇಶದ ಆಗುಹೋಗುಗಳನ್ನು ನಿಯಂತ್ರಿಸುವ ಕೇಂದ್ರಗಳಾಗಿವೆ. ಕೇವಲ ಹಿಂದೂ ಧರ್ಮದ ಮೂಲವನ್ನು ಪ್ರತಿನಿಧಿಸದೆ, ಜೈನ ಹಾಗೂ ಮುಸ್ಲಿಂ ಸಮುದಾಯವನ್ನು ಪ್ರತಿನಿಧಿಸುವ ದೈವಗಳೂ ತುಳುನಾಡಿನಲ್ಲಿ ಕಂಡು ಬರುತ್ತದೆ. ಹೀಗೆ ವಿವಿಧ ಜಾತಿ ಹಾಗೂ ಧರ್ಮಗಳ ಸಾಮರಸ್ಯದ ದ್ಯೋತಕವಾಗಿ, ಹಲವಾರು ದೈವಗಳ ಆರಾಧನಾ ವ್ಯವಸ್ಥೆಯು ತುಳುನಾಡಿನ ವಿಶಿಷ್ಟತೆಯಾಗಿ ಮೂಡಿಬರುತ್ತಿದೆ. ಪರಮತ ಸಹಿಷ್ಣುತೆ ಪ್ರಜಾಸತ್ತಾತ್ಮಕ ಆಶಯವಾಗಿದ್ದು, ಅದರಂತೆ ತುಳುವರು ಸಹ ಪರಸ್ಪರ ಪ್ರೀತಿ, ವಿಶ್ವಾಸ, ನಂಬಿಕೆಗಳಿಂದ ಸಂಘರ್ಷಗಳಿಗೆ ಎಡೆಯಿಲ್ಲದಂತೆ

ಸಹಬಾಳ್ವೆಯಿಂದ ಜೀವನ ನಡೆಸುತ್ತಿದ್ದಾರೆ. ನ್ಯಾಯದಾನದಲ್ಲಿನ ಪಾರದರ್ಶಕತೆಯು ಸಮುದಾಯದ ಪಾಲುದಾರಿಕೆಯಲ್ಲಿ ಪ್ರಮುಖ ಪಾತ್ರವಾಗಿದ್ದು, ಇದರ ಫಲವಾಗಿ ನಾವಿಂದು ಕಾಣುತ್ತಿರುವ ಸಹಬಾಳ್ವೆ, ಸೌಹಾರ್ದತೆ, ಜಾತ್ಯತೀತ ಮನೋಭಾವ ಹಾಗೂ ಆಡಳಿತಾತ್ಮಕ ಕಾರ್ಯನಿರ್ವಹಣೆಯಲ್ಲಿ ದೈವಾರಾಧನೆಯ ಶಿಸ್ತುಬದ್ಧವಾದ ಆಚರಣೆಯ ಮಹತ್ವವು ಅರಿವಾಗುತ್ತದೆ.

ಈ ದೈವಾರಾಧನೆಯ ರಂಗದಲ್ಲಿ ಸ್ತ್ರೀ ಹಾಗೂ ಪುರುಷ ಎರಡೂ ದೈವಗಳ ಆರಾಧನೆಯಿದ್ದು, ಪುರುಷ ದೈವದಷ್ಟೇ ಸ್ತ್ರೀ ದೈವಗಳ ಆರಾಧನೆಯೂ ಇಂದು ಪ್ರಮುಖವಾಗಿ ಗುರುತಿಸಿಕೊಂಡಿದೆ. ಸೀಮೆ, ಮಾಗಣೆ, ಗ್ರಾಮ, ಕುಟುಂಬಗಳಲ್ಲಿ ಆರಾಧಿಸುವ ದೈವಗಳಲ್ಲಿ ಸ್ತ್ರೀ ದೈವಗಳ ಆರಾಧನೆಯು ಹೆಚ್ಚು ಮಹತ್ವವನ್ನು ಪಡೆದುಕೊಂಡಿವೆ. ಸೀಮೆ, ಮಾಗಣೆ ಹಾಗೂ ಗ್ರಾಮಗಳಲ್ಲಿ ರಾಜನ್ ದೈವಗಳ ಜೊತೆಯಲ್ಲಿ, ದೇವಸ್ಥಾನಗಳಲ್ಲಿ ದೇವರ ಜೊತೆಯಲ್ಲಿ ಇರುವ ಈ ಶಕ್ತಿಗಳ ಆರಾಧನಾ ಪ್ರಕ್ರಿಯೆಗಳು ಕೆಲವು ಕಡೆ ಸಾಮ್ಯತೆಯನ್ನು ಪಡೆದುಕೊಂಡಿದ್ದರೆ, ಇನ್ನೂ ಕೆಲವು ಕಡೆ ಭಿನ್ನತೆಯನ್ನು ಪಡೆದುಕೊಂಡಿವೆ.

ಸ್ತ್ರೀ ದೈವಗಳ ಆರಾಧನಾರಂಗವು ಸ್ತ್ರೀ ಸಮುದಾಯದ ಭಾವನೆ, ಚಿಂತನೆ, ಮನೋಭೂಮಿಕೆಯನ್ನು ಪ್ರತಿನಿಧಿಸುವ ಕೇಂದ್ರವೆಂದು ಗುರುತಿಸಲ್ಪಟ್ಟಿದ್ದರೂ, ಈ ಆರಾಧನೆಯಲ್ಲಿ ಸ್ತ್ರೀ ಸಮುದಾಯದ ಪಾಲುದಾರಿಕೆ ನಿರೀಕ್ಷಿತ ಮಟ್ಟದಲ್ಲಿಲ್ಲ. ವಿವಿಧ ಸ್ತರದ ಜನವರ್ಗಗಳು ಈ ಆರಾಧನಾ ವ್ಯವಸ್ಥೆಯಲ್ಲಿ ಸಮುಚಿತ ಮಾರ್ಗದಲ್ಲಿ ಪಾಲ್ಗೊಂಡರೂ, ಪ್ರತಿಯೊಂದು ಮೂಲ ವ್ಯವಸ್ಥೆಯೂ ಪುರುಷವರ್ಗದ ಮೇಲುಸ್ತುವಾರಿಯಲ್ಲಿ ನಡೆಯುತ್ತಿರುವುದಂತೂ ವಾಸ್ತವ ವಿಚಾರ. ಬಹು ಆಯಾಮದ ಆರಾಧನಾರಂಗದಲ್ಲಿಯೂ, ಸ್ತ್ರೀ ಸಮುದಾಯದ ಪಾಲ್ಗೊಳ್ಳುವಿಕೆಯನ್ನು ಒಟ್ಟು ಆಡಳಿತ ವ್ಯವಸ್ಥೆಗಳು ಮಡಿವಂತಿಕೆಯ ನೆಪವೊಡ್ಡಿ ನಿರಾಕರಿಸಿವೆ.

ಸಿರಿ ಜಾತ್ರೆ ಇದಕ್ಕೊಂದು ಅಪವಾದವೆಂಬಂತೆ ಇಂದು ಆಲಡೆಗಳಲ್ಲಿ ನಡೆಯುವ ಸಿರಿ ಜಾತ್ರೆಗಳಲ್ಲಿ ಸ್ತ್ರೀ ಸಮುದಾಯವು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿದೆ. ಆರಾಧನಾ ವ್ಯವಸ್ಥೆಯಲ್ಲಿ ಸ್ತ್ರೀ ದೈವಗಳ ಆರಾಧನೆಯನ್ನು ಶ್ರೇಣೀಕೃತ ಸಮುದಾಯಗಳು ತಮ್ಮ ವ್ಯವಸ್ಥೆಗಳಿಗೆ ಪೂರಕವಾಗಿ ನಡೆಸಿಕೊಂಡು ಬಂದಿವೆ. ಇಂತಹ ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿ ಧರ್ಮದ ಎಲ್ಲೆ ಮೀರಿ ತುಳುನಾಡಿನಲ್ಲಿ ದೈವಾರಾಧನೆಯನ್ನು ನಡೆಸಿಕೊಂಡು ಬರುತ್ತಿದ್ದರೂ, ಸ್ತ್ರೀ ದೈವಗಳ ಆರಾಧನೆಯ ವಿಚಾರಕ್ಕೆ ಬಂದಾಗ ಈ ದೈವಗಳ ಆರಾಧನೆಯು ಒಟ್ಟು ದೈವಾರಾಧನೆಯ ಜೊತೆಯಲ್ಲಿಯೇ ನಡೆಯುತ್ತಿದೆ. ಒಂದು ನಿರ್ದಿಷ್ಟ ಪ್ರಮಾಣದಲ್ಲಿ ಸ್ತ್ರೀ ದೈವಗಳನ್ನು ಗುರುತಿಸಿಕೊಳ್ಳುವುದು ಕಷ್ಟದ ವಿಚಾರ. ಪಾಡ್ದನ, ಸಂದಿ ಬೀರ ಪಾರಿಗಳ ಮೂಲಕ ಮೂಲ ನೆಲೆಯಲ್ಲಿ ಪ್ರಾರಂಭಗೊಂಡ ಆರಾಧನೆಯು ಇಂದು ತಮ್ಮ ತಮ್ಮ ಸಮಾಜದ ಕಟ್ಟುಪಾಡುಗಳೊಂದಿಗೆ ಅನುಷ್ಠಾನಗೊಂಡಿವೆ.

ಪ್ರಾಚೀನ ಕಾಲದಲ್ಲಿ ದೇವಸ್ಥಾನದ ಪರಿವಾರ ಶಕ್ತಿಗಳಾಗಿ ದೈವಗಳನ್ನು ಆರಾಧಿಸುತ್ತಿದ್ದರು. ಕೊಡಮಣಿತ್ತಾಯ, ರಕ್ತೇಶ್ವರಿ, ಜಾರಂದಾಯ, ಪಂಜುರ್ಲಿ, ಜುಮಾದಿ, ಚೌಂಡಿ, ವ್ಯಾಘ್ರ ಚಾಮುಂಡಿ, ಬಬ್ಬರ್ಯ, ಕಲ್ಕುಡ, ವರ್ತೆ (ಕಲ್ಲುರ್ಟಿ) ಮುಂತಾದ ಶಕ್ತಿಗಳು ಈ ಆರಾಧನಾ ವಲಯಕ್ಕೆ ಒಳಪಟ್ಟಿವೆ. ದೇವಸ್ಥಾನದ ಪ್ರಧಾನ ದೇವರು,

ಪರಿವಾರ ದೇವರಿಗೆ ಅಭಿಷೇಕ, ಅಲಂಕಾರ, ನೈವೇದ್ಯ ಸಮರ್ಪಣೆ, ಮಹಾಪೂಜೆಗಳು ನೆರವೇರಿದ ತರುವಾಯ ಪರಿವಾರ ದೈವಗಳಿಗೆ ತೀರ್ಥ ಸಂಪ್ರೋಕ್ಷಣೆಯಂತಹ ವಿಧಿ ವಿಧಾನಗಳು ಕೆಲವೊಂದು ದೇವಸ್ಥಾನಗಳಲ್ಲಿ ನಡೆಯುತ್ತದೆ. ಇಲ್ಲವಾದಲ್ಲಿ ಸಂಕ್ರಮಣದಂತಹ ವಿಶೇಷ ಸಂದರ್ಭದಲ್ಲಿ ಪರ್ವ ಸೇವೆಗಳು ನಡೆಯುತ್ತದೆ. ದೇವರಿಗೆ ಪಂಚಕಜ್ಜಾಯ, ಎಳನೀರು, ತೆಂಗಿನಕಾಯಿಗಳನ್ನು ಸಮರ್ಪಿಸಿ ಧೂಪಾರಾಧನೆಯನ್ನು ಮಾಡಿ ಪರ್ವಗಳನ್ನು ನಡೆಸುತ್ತಾರೆ. ಇಂತಹ ಸಂದರ್ಭದಲ್ಲಿ ಈ ಕ್ಷೇತ್ರದಲ್ಲಿ ಪ್ರಧಾನ ಶಕ್ತಿಯೆಂದು ಕರೆಯಲ್ಪಡುವ ದೈವಗಳಿಗೆ ದರ್ಶನಾವೇಶದ ಸೇವೆಗಳು ನಡೆಯುತ್ತದೆ. ಭಕ್ತರ ಅಭೀಷ್ಟಗಳನ್ನು ಪೂರೈಸುವುದಕ್ಕಾಗಿ ಹಾಗೂ ಸಂಕಷ್ಟಗಳ ನಿವಾರಣೆಗಾಗಿ ಹರಕೆಗಳನ್ನು ಸಲ್ಲಿಸುವ ಕಾರ್ಯಕ್ರಮಗಳು ನಡೆಯುತ್ತವೆ.

ದೇವಾಲಯಗಳಲ್ಲಿ ದೇವರಿಗೆ ವೈದಿಕ ಕ್ರಮದಲ್ಲಿ ಸೇವೆಗಳು ನಡೆಯುತ್ತವೆ. ಅಲ್ಲಿ ದರ್ಶನಾವೇಶದ ಕ್ರಮಗಳು ಇರುವುದಿಲ್ಲ. ಹಾಗಾಗಿ ಕ್ಷೇತ್ರದಲ್ಲಿರುವ ಲೋಪದೋಷಗಳು ಹಾಗೂ ಕಾಲಾವಧಿ ಇನ್ನಿತರ ಸೇವೆಗಳ ಕುರಿತು ಅಲ್ಲಿನ ದೈವವು ತನ್ನ ನುಡಿಯ ಮೂಲಕ ವಿಚಾರಗಳನ್ನು ಭಕ್ತರಿಗೆ ತಿಳಿಸುವ ಕೆಲಸ ಒಟ್ಟು ಆರಾಧನಾ ವ್ಯವಸ್ಥೆಯ ಭಾಗವೆಂದು ಹೇಳಬಹುದು. ಈ ಸಂದರ್ಭದಲ್ಲಿ ಪ್ರಧಾನ ದೈವಗಳ ಜೊತೆಯಲ್ಲಿ ಸ್ತ್ರೀ ದೈವಗಳು ಆರಾಧನೆಯ ವ್ಯಾಪ್ತಿಯಲ್ಲಿದ್ದರೂ, ಪ್ರಧಾನ ದೈವಕ್ಕೆ ಸೀಮಿತವಾಗಿ ಮಾತ್ರ ದರ್ಶನಾವೇಶಗಳು ನಡೆಯುತ್ತದೆ. ಉದಾಹರಣೆಗೆ ದೇವಸ್ಥಾನದ ನಾಗ ಸಾನಿಧ್ಯದಲ್ಲಿ ಉನ್ನತ ಸ್ತರದಲ್ಲಿರುವ ರಕ್ತೇಶ್ವರಿಗೆ ಪ್ರಧಾನ ಸ್ಥಾನವಿದ್ದರೂ ಈ ಶಕ್ತಿಗೆ ದರ್ಶನಾವೇಶದ ಕ್ರಮವಿಲ್ಲ. ಕೆಲವೊಂದು ದೇವಸ್ಥಾನದ ಪರಿವಾರ ಶಕ್ತಿಗಳಲ್ಲಿ ಪ್ರಧಾನ ದೈವಗಳನ್ನು ಹೊರತುಪಡಿಸಿ ಕೆಳಸ್ತರದ ದೈವಗಳಿಗೆ ದರ್ಶನಾವೇಶ ಇರುವುದು ಕಂಡುಬರುತ್ತವೆ.

ದೇವಸ್ಥಾನದ ವಾರ್ಷಿಕ ಉತ್ಸವಾದಿ ಸಂದರ್ಭದಲ್ಲಿ ಹಲವು ದಿವಸಗಳ ಬಲಿ, ರಥೋತ್ಸವದಂತಹ ಕಾರ್ಯಕ್ರಮಗಳು ನಡೆಯುತ್ತವೆ. ಈ ಸಂದರ್ಭದಲ್ಲಿ ದೈವ-ದೇವರುಗಳ ಭೇಟಿಯೆಂಬ ವಿಶೇಷ ಸನ್ನಿವೇಶವು ನಡೆಯುತ್ತದೆ. ಪ್ರಧಾನ ದೈವಗಳು ದೇವರನ್ನು ಭೇಟಿ ಮಾಡುವ ಸಂದರ್ಭದಲ್ಲಿ ಪ್ರಧಾನ ಶಕ್ತಿಸ್ಥಾನದಲ್ಲಿ ಸ್ತ್ರೀ ದೈವಗಳಿದ್ದರೂ, ಅಲ್ಲಿ ಪುರುಷ ದೈವಗಳ ಭೇಟಿ ಮಾತ್ರ ನಡೆಯುತ್ತದೆ. ಉತ್ಸವಾದಿ ಕಾರ್ಯಕ್ರಮಗಳು ಮುಗಿದ ನಂತರ ಪರಿವಾರ ದೈವಗಳಿಗೆ ಕೋಲ/ನೇಮದಂತಹ ಸೇವೆಗಳು ನಡೆಯುತ್ತವೆ. ಈ ಸಂದರ್ಭದಲ್ಲಿ ಸ್ತ್ರೀ ದೈವಗಳಿಗೂ ಕೋಲ ಸೇವೆಯನ್ನು ಕೊಡುತ್ತಾರೆ.

ದೈವಗಳ ಆರಾಧನೆಯ ಹಿಂದಿರುವ ಅಗೋಚರ ತಂತ್ರಗಳ ಅರಿವು ಯಾರಿಗೂ ಇಲ್ಲ. ವೈದಿಕತಂತ್ರ, ಮಂತ್ರಗಳಲ್ಲಿ ಉಲ್ಲೇಖವಾಗಿರದ ಹಲವಾರು ತಾಮಸ ವಿಧಿವಿಧಾನಗಳು ಪ್ರಾಚೀನ ಕಾಲದಲ್ಲಿ ಅನುಷ್ಠಾನದಲ್ಲಿತ್ತು. ಈ ವಿಧಿಗಳಲ್ಲಿ ಕೊಂಚ ವ್ಯತ್ಯಾಸವಾದರೂ, ಸಮಸ್ಯೆ ಕಟ್ಟಿಟ್ಟ ಬುತ್ತಿ. ಪ್ರಾಚೀನ ತುಳು ಸಾಹಿತ್ಯಗಳಲ್ಲಿ ಮೂಲ ಜನಾಂಗಕ್ಕೂ, ಅನಂತರ ವಲಸೆ ಬಂದ ವೈದಿಕ ಸಮುದಾಯದ ನಡುವೆ ಸಂಘರ್ಷಗಳಾದ ಉದಾಹರಣೆಗಳಿವೆ. ಇದನ್ನು ಪಂಜುರ್ಲಿ ಪಾಡ್ದನ ಸ್ಪಷ್ಟಪಡಿಸುತ್ತದೆ. ದೈವವನ್ನು ಹಿಡಿಯಲು ಅವರು ಆನೇಕ ತಂತ್ರವಿದ್ಯೆಗಳನ್ನು ಬಳಸಿಕೊಂಡರೂ, ದೈವ ಅವರೆಲ್ಲರನ್ನು ಮಣಿಸಿ ಆರಾಧನೆ ಪಡೆಯುತ್ತದೆ. ಕಲ್ಕುಡ, ಕಲ್ಲುರ್ಟಿ ಪಾಡ್ದನದಲ್ಲೂ ಈ ಉಲ್ಲೇಖವಿದೆ. ಒಮ್ಮೆ ನಂಬಿ ಆರಾಧನೆ ಮಾಡಿದ ದೈವಗಳನ್ನು ಬದಲಾದ ಕಾಲಘಟ್ಟದಲ್ಲಿ ನಿರಾಕರಣೆ ಅಸಾಧ್ಯ. ತಮ್ಮ ಮೂಲ ಸಂಸ್ಕೃತಿಯನ್ನು ಜತನದಿಂದ

ಕಾಪಿಟ್ಟುಕೊಂಡು, ಮುಂದಿನ ಪೀಳಿಗೆಗೆ ಅದನ್ನು ಭಾವನಾತ್ಮಕವಾಗಿ ಹಸ್ತಾಂತರಿಸುವಲ್ಲಿ ದೈವಾರಾಧನೆಯ ಪಾತ್ರ ಪ್ರಮುಖವೇ ಹೊರತು ದೇವತಾರಾಧನೆಯಲ್ಲ. ಆದ್ದರಿಂದ ತುಳುವರ ಪಾಲಿಗೆ ದೈವಾರಾಧನೆಯೇ ಜೀವಾಳವಾಗಿದೆ.

ತುಳುನಾಡಿನ ಮೂಲ ತುಳುವರನ್ನು ಹೊರತುಪಡಿಸಿ ಉಳಿದ ಸಮುದಾಯದ ಜನರಿಗೆ ಕುಲ ಗುರುಗಳು ಇರುತ್ತಿದ್ದರು. ಮೂಲ ತುಳುವರು ತಮ್ಮ ಸೋದರ ಮಾವನನ್ನೇ ಕುಲಗುರು ಎಂದು ಪರಿಗಣಿಸುತ್ತಿದ್ದರು. ಈ ಸಮುದಾಯದ ಜನರಿಗೆ ಯಾವುದೇ ಮಠಮಾನ್ಯವಾಗಲೀ, ಸ್ವಾಮೀಜಿಗಳಾಗಲೀ ಇಲ್ಲ. ಇಲ್ಲಿ ಗ್ರಾಮ, ಮಾಗಣೆ, ಸೀಮೆಗಳಲ್ಲಿರುವ ಧಾರ್ಮಿಕ ಕ್ಷೇತ್ರಗಳಲ್ಲಿ ನಡೆಯುವ ಗಡಿಪಟ್ಟ ಪ್ರದಾನದಂತಹ ವಿಶೇಷ ಕಾರ್ಯಕ್ರಮಗಳು ಕುಟುಂಬದವರ ಒಪ್ಪಿಗೆ ಮೇರೆಗೆ ನಡೆಯುತ್ತಿತ್ತು. ಈ ರೀತಿಯ ಪರಂಪರೆ ತುಳುವರಲ್ಲಿ ನಾಯಕತ್ವ ಗುಣವನ್ನು ಬೆಳೆಸುತ್ತಿತ್ತು. ಇವರಿಗೆ ನ್ಯಾಯ ತೀರ್ಮಾನದಂತಹ ಗುರುತರ ಜವಾಬ್ದಾರಿ ಇರುತ್ತಿತ್ತು. ಸ್ತ್ರೀ ದೈವಗಳನ್ನು ಆರಾಧಿಸುವ ಪ್ರಮುಖ ನೆಲೆಗಳಾದ ಕುಂಟಾಡಿ ರಕ್ತೇಶ್ವರಿ ಸಾನಿಧ್ಯ ಹಾಗೂ ಅಳದಂಗಡಿಯ ಸತ್ಯದೇವತೆಯ ದೈವಸ್ಥಾನವು ಪ್ರಮುಖ ಗಡಿಪಟ್ಟ ಪ್ರಧಾನ ಕ್ಷೇತ್ರಗಳಾಗಿವೆ. ಉಳಿದಂತೆ ಕೊಡಮಣಿತ್ತಾಯ, ಜಾರಂದಾಯ, ಜುಮಾದಿ, ಪಂಜುರ್ಲಿಯಂತಹ ರಾಜನ್ ದೈವಗಳ ದೈವಸ್ಥಾನಗಳಲ್ಲಿ ಗಡಿಪಟ್ಟ ಪ್ರಧಾನ ಕಾರ್ಯಕ್ರಮಗಳು ನಡೆಯುತ್ತವೆ.

ತುಳುನಾಡನ್ನು ಆಳಿದ ರಾಜಮನೆತನಗಳಲ್ಲಿ ಜೈನವಂಶದ ಪಾತ್ರ ಮಹತ್ತರವಾದುದು. ಈ ಧರ್ಮದ ಸಂಪ್ರದಾಯ, ಆಚರಣೆ ಪರಂಪರೆಗಳು ಹಿಂದೂ ಧರ್ಮದ ಸಂಪ್ರದಾಯ, ಆಚರಣೆ, ಪರಂಪರೆಗಳೊಂದಿಗೆ ತಕ್ಕಮಟ್ಟಿಗೆ ಸಾಮ್ಯತೆಯನ್ನು ಪಡೆದುಕೊಂಡಿದೆ. ತುಂಡರಸರಾಗಿ ತುಳುನಾಡನ್ನು ಆಳಿದ ಕಾರ್ಕಳದ ಭೈರರಸರು, ಮೂಡಬಿದಿರೆಯ ಚೌಟರು, ವೇಣೂರಿನ ಅಜಿಲರು, ಬಂಗಾಡಿಯ ಬಂಗರಸರು, ಬೈಲಂಗಡಿಯ ಮೂಲರು ತುಳುನಾಡಿನ ದೈವಾರಾಧನೆಗಳಿಗೆ ಹೊಸ ರಾಜಕೀಯ ಆಯಾಮವನ್ನು ಒದಗಿಸಿಕೊಟ್ಟವರು. ಧರ್ಮ ಪುನರುತ್ಥಾನಕ್ಕಾಗಿ ಜೈನರು ತುಳುನಾಡಿನಲ್ಲಿ ಬಸದಿಗಳನ್ನು ನಿರ್ಮಿಸಿದರು. ತೀರ್ಥಂಕರರನ್ನು ಮತ್ತು ಪದ್ಮಾವತಿ ಅಮ್ಮನನ್ನು ಬಸದಿಗಳಲ್ಲಿ ಆರಾಧಿಸುತ್ತಿದ್ದರು. ಇವರಿಗೆ ಕಾರ್ಕಳದ ನಲ್ಲೂರಿನ ಜೈನಮಠವು ಗುರುಪೀಠವಾಗಿದ್ದು, ಮೂಡಬಿದಿರೆಯ ಸಾವಿರ ಕಂಬಗಳ ಬಸದಿ ತುಳುನಾಡಿಗೆ ಜೈನರ ಕೊಡುಗೆಯಾಗಿದೆ. ತುಳುನಾಡಿನಲ್ಲಿ ಆರಾಧನೆಗೊಳ್ಳುತ್ತಿದ್ದ ಸ್ತ್ರೀ ದೈವಗಳಲ್ಲಿ ಪ್ರಾಕೃತಿಕ ಶಕ್ತಿಯಾಗಿ ಮೂಡಿಬಂದ ರಕ್ತೇಶ್ವರಿ ದೈವವು ಇವರ ಕಾಲದಲ್ಲಿ ಹೆಚ್ಚಿನ ಪ್ರಸರಣೆಯನ್ನು ಪಡೆಯಿತು. ಇವರು ಈ ದೈವದ ಮೇಲೆ ವಿಶೇಷ ಆಸ್ಥೆ ತೋರಿದ್ದು ಈ ದೈವಕ್ಕೆ ಪ್ರತ್ಯೇಕ ಉಂಬಳಿ, ಪಂಚ ಜೀಟಿಗೆ, ಬೆಳ್ಳೊಡೆಗಳಂತಹ ವೈಭವದ ಸೇವೆಯನ್ನು ನೀಡಿದ್ದಾರೆ. ಇನ್ನುಳಿದಂತೆ ರಾಜನ್ ದೈವವಾದ ಕೊಡಮಣಿತ್ತಾಯ ದೈವಕ್ಕೆ ಈ ತೆರನಾದ ಸೇವೆಯನ್ನು ನೀಡುತ್ತಾ ಬಂದಿದ್ದಾರೆ.

ನ್ಯಾಯ ತೀರ್ಮಾನಕ್ಕೆ ಸಂಬಂಧಿಸಿದಂತೆ ಸ್ತ್ರೀ ದೈವಗಳಲ್ಲಿ ಕಲ್ಲುರ್ಟಿ ದೈವವು ತುಳುನಾಡಿನಲ್ಲಿ ವಿಶೇಷ ಸ್ಥಾನವನ್ನು ಪಡೆದಿದ್ದು, ಉಳಿದಂತೆ ರಕ್ತೇಶ್ವರಿ ಮತ್ತು ಮಾಯಂದಾಲ್ ದೈವವೂ ನ್ಯಾಯ ತೀರ್ಮಾನಕ್ಕೆ ಹೆಸರುವಾಸಿಯಾಗಿವೆ. ಕುಟುಂಬ ಹಾಗೂ ಮನೆಗಳಿಗೆ ಸಂಬಂಧಿಸಿದ ವ್ಯಾಜ್ಯಗಳಲ್ಲಿ ಮಂತ್ರದೇವತೆ, ಬೈಕಾಡ್ತಿ,

ಸತ್ಯದೇವತೆ, ವರ್ತೆಯಂತಹ ದೈವಗಳು ನ್ಯಾಯ ತೀರ್ಮಾನವನ್ನು ಮಾಡುತ್ತವೆ. ಉಳಿದಂತೆ ತಂಕರು ಬೈದಿತಿ, ಅಜ್ಜಿ ಬೆರಂತೊಳ್, ಗಂಗಮ್ಮ, ಬ್ಯಾರ್ದಿ ಬೂತ, ಉಮ್ಮಳ್ತಿಯಂತಹ ಹೆಚ್ಚಿನ ದೈವಗಳು ಸಾಂಕೇತಿಕ ಆರಾಧನೆ ಹಾಗೂ ರಾಜನ್ ದೈವಗಳ ಜೊತೆ ಆರಾಧನೆ ಪಡೆಯುತ್ತಿರುವುದರಿಂದ ಆಶ್ರಿತ ದೈವಗಳಾಗಿ ಕಾಣಸಿಗುತ್ತವೆ. ಆದ್ದರಿಂದ ಈ ದೈವಗಳ ವಿಶೇಷ ಪ್ರಸರಣೆ ತುಳುನಾಡಿನಲ್ಲಿ ಕಂಡುಬರುವುದಿಲ್ಲ.

ಉಡುಪಿಯ ತೆಂಕಣ ಭಾಗಗಳಲ್ಲಿನ ಸೀಮೆ, ಮಾಗಣೆಗಳಲ್ಲಿರುವ ಜುಮಾದಿ, ಜಾರಂದಾಯ, ಕೊಡಮಣಿತ್ತಾಯ, ಅಣ್ಣಪ್ಪ ಪಂಜುರ್ಲಿಯಂತಹ ರಾಜನ್ ದೈವಗಳ ದೈವಸ್ಥಾನಗಳಲ್ಲಿ ಸ್ತ್ರೀ ದೈವಗಳ ಇರುವಿಕೆ ಬಹಳ ವಿರಳವಾಗಿ ಕಂಡುಬರುತ್ತವೆ. ಕೆಲವು ಪ್ರದೇಶಗಳಲ್ಲಿ ಬಾಲೆಮಾನಿ ಮತ್ತು ದಾರಂಬಲ್ಲಾಳ್ತಿಯಂತಹ ಸ್ತ್ರೀ ದೈವಗಳ ಆರಾಧನೆಯನ್ನು ಕಾಣಬಹುದು. ಉದಾಹರಣೆಗೆ ಕಲ್ಲಟ್ಟೆ ಜಾರಂದಾಯ, ಉಳೆಪಾಡಿ ಗುಡ್ಡೆಸಾನದ ಗುಡ್ಡೆ ಜುಮಾದಿ, ಮೂಲ್ಕಿ ನಡಿಬೆಟ್ಟುವಿನ ಜುಮಾದಿ ದೈವಸ್ಥಾನಗಳಲ್ಲಿ ಸ್ತ್ರೀ ದೈವಗಳ ಆರಾಧನೆ ಕಂಡು ಬರುತ್ತವೆ. ಉಳಿದಂತೆ ಉರ್ವ ಚಿಲಿಂಬಿಯ ಮಲರಾಯ ದೈವಸ್ಥಾನದಲ್ಲಿ ಬ್ರಾಂದಿ ದೈವದ ಆರಾಧನೆ ಕಂಡುಬರುತ್ತದೆ.

ದೈವಾರಾಧನೆಯ ಹೆಚ್ಚಿನ ಸಂದರ್ಭದಲ್ಲಿ ತುಳುನಾಡಿನ ಎಲ್ಲಾ ವರ್ಗಗಳು ಸಮಾನ ಪಾಲುದಾರಿಕೆಯೊಂದಿಗೆ ಕೆಲಸ ನಿರ್ವಹಿಸುತ್ತಾರೆ. ಬ್ರಾಹ್ಮಣ ಸಮುದಾಯವು ಮುಹೂರ್ತ ನಿಗದಿ, ಪ್ರತಿಷ್ಠೆ, ಪ್ರಾರ್ಥನೆ, ಮದಿಪಿನಂತಹ ಗೌರವದ ಸ್ಥಾನಗಳನ್ನು ಪಡೆಯುತ್ತಾರೆ. ಜೈನ ಮತ್ತು ಬಂಟ ಸಮುದಾಯದವರು ಆಡಳಿತ ವ್ಯವಸ್ಥೆಯ ಜೊತೆಜೊತೆಗೆ ಗಡಿಕಾರರಾಗಿ ಹಾಗೂ ದೈವಸ್ಥಾನದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಾರೆ. ದೇವಾಡಿಗ ಸಮುದಾಯಕ್ಕೆ ವಾದ್ಯ, ಹಿಮ್ಮೇಳನದ ಕೆಲಸ, ನೇಕಾರ ಸಮುದಾಯ ಬಟ್ಟೆಯನ್ನು ಒದಗಿಸುವುದು, ವಿಶ್ವಕರ್ಮ ಸಮುದಾಯ ಮೊಗ ಮೂರ್ತಿಗಳ ಸ್ವಚ್ಛತೆ, ಮರದ ಕೆಲಸ ಕಾರ್ಯಗಳು, ಚಿನ್ನ ಬೆಳ್ಳಿಯಂತಹ ಆಭರಣಗಳ ತಯಾರಿ, ಗಾಣಿಗ ಸಮುದಾಯಗಳು ಎಣ್ಣೆಯನ್ನು ಒದಗಿಸುವುದು, ಸಫಲಿಗರು ದೈವದ ಬಸವನ ಆರೈಕೆ, ಬೆಳ್ಗೊಡೆ ಹಿಡಿಯುವ ಕೆಲಸ, ಮೂಲ್ಯ ಸಮುದಾಯಕ್ಕೆ ಪಲ್ಲಕ್ಕಿ ಹೊರುವ ಕೆಲಸ, ಮಡಿವಾಳ ಸಮುದಾಯಕ್ಕೆ ವಸ್ತ್ರದ ದಲ್ಯ ಹಾಗೂ ಜೀಟಿಗೆ ಹಿಡಿಯುವ, ಬಿಲ್ಲವ ಸಮುದಾಯ ಪೂ ಪೂಜನೆಯ ಜೊತೆಗೆ ಮಾನೆಚ್ಚಿಯ ಕಾರ್ಯ, ತುಳುನಾಡಿನ ಮೂಲ ನಿವಾಸಿಗರಾದ ಕೊರಗ ಸಮುದಾಯ ಡೋಲು ಹಾಗೂ ಕದೋನಿ ಸಿಡಿಸುವ ಕಾರ್ಯ, ನಲಿಕೆ, ಪಂಬದ, ಪರವ ಸಮುದಾಯಗಳು ಕೋಲ ಕಟ್ಟಿ ನರ್ತನ ಸೇವೆಯನ್ನು ಮಾಡುವ ಕಾರ್ಯವನ್ನು ಮಾಡುತ್ತಾರೆ. ಹೀಗೆ ಸಮುದಾಯದ ಪಾಲುದಾರಿಕೆಯೊಂದಿಗೆ ತುಳುನಾಡಿನ ದೈವಾರಾಧನೆಯು ನಡೆಯುತ್ತದೆ.

ಹೆಚ್ಚಿನ ದೈವಸ್ಥಾನ, ಗರೋಡಿ ಹಾಗೂ ಇನ್ನಿತರ ದೈವಾರಾಧನೆಯಲ್ಲಿ ಕೋಲ ನೇಮದ ಮುನ್ನ ಬಣ್ಣಗಾರಿಕೆ ಮಾಡುವ ಸಂದರ್ಭದಲ್ಲಿ ಪಾಡ್ದನ ಸಂದಿಗಳನ್ನು ನಲಿಕೆ, ಪರವ, ಪಂಬದ ಜನಾಂಗದ ಹೆಣ್ಣುಮಕ್ಕಳು ಹೇಳುವುದನ್ನು ನೋಡುತ್ತೇವೆ. ಕೋಲ ಕಟ್ಟುವ ಸಮುದಾಯದ ಪುರುಷರ ಜೊತೆಯಲ್ಲಿ ಅವರ ಮಹಿಳೆಯರು ಪರಸ್ಪರ ಸಹಕಾರ ಮನೋಭಾವದಿಂದ ಕೆಲಸ ಮಾಡುವುದರಿಂದ ಅವರಿಗೆ ಪಾಡ್ದನದ ಪೂರ್ಣ ಪರ್ವಗಳು ತಿಳಿದಿರುತ್ತದೆ. ಹಿರಿಯರಿಂದ ಬಳುವಳಿಯಾಗಿ ಬಂದ ಈ ವೃತ್ತಿಯಲ್ಲಿ ಈ ಸಮುದಾಯದ ಪುರುಷರು

ಮಾತ್ರವಲ್ಲದೆ ಸ್ತ್ರೀಯರೂ ಅಷ್ಟೇ ಶ್ರದ್ಧಾಭಕ್ತಿಗಳಿಂದ ಪಾಲ್ಗೊಂಡರೂ ಅವರ ಪಾಲುದಾರಿಕೆ ಜನಮಾನಸದಲ್ಲಿ ಗೌಣವಾಗಿರುತ್ತದೆ. ದೈವ ನರ್ತಕನಿಗೆ ಸಿಗುವ ಪಡಿಯಕ್ಕಿ ಹಾಗೂ ಸಂಭಾವನೆಗೆ ಪೂರಕವಾಗಿ ದೈವನರ್ತಕನ ಒಟ್ಟು ಕುಟುಂಬವು ತಮ್ಮನ್ನು ಶ್ರದ್ಧಾಭಕ್ತಿಗಳಿಂದ ಆರಾಧನಾ ಕಾರ್ಯದಲ್ಲಿ ತೊಡಗಿಸಿಕೊಳ್ಳುತ್ತವೆ. ದೈವಾರಾಧನಾ ಸಂದರ್ಭದಲ್ಲಿ ಸಾಮಾನ್ಯವಾಗಿ ದೈವನರ್ತಕನ ತಲೆಮಣಿ, ಗಗ್ಗರ, ಚಪ್ಪರಕೊಂಬುಗಳನ್ನು ಯಾರೂ ಸ್ಪರ್ಶಿಸುವಂತಿಲ್ಲ. ಆದರೆ ದೈವ ನರ್ತಕನ ಪೂರ್ವ ಸಿದ್ಧತೆಗಳಲ್ಲಿ ಆ ಸಮುದಾಯದ ಮಹಿಳೆಯರು ದೈವ ನರ್ತಕನಿಗೆ ಸಹಾಯ ಮಾಡುವ ಸಂದರ್ಭದಲ್ಲಿ ಇವುಗಳನ್ನು ಸ್ಪರ್ಶಿಸುತ್ತಾರೆ.

ಬೇರೆ ಬೇರೆ ಹೆಸರಿನ ದೈವಗಳಿಗನುಗುಣವಾಗಿ ಬೇರೆ ಬೇರೆ ಸಮುದಾಯದವರು ಮುಕ್ಕಾಲ್ದಿ, ಮದಿಪು, ದರ್ಶನಾವೇಶ, ಹಿಮ್ಮೇಳಗಳಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಾರೆ. ಕೊಡಮಣಿತ್ತಾಯ ದೈವಕ್ಕೆ ಬಂಟ, ಜೈನ, ಬಿಲ್ಲವ, ಮೂಲ್ಯ ಸಮುದಾಯದವರು ಹಾಗೂ ಕಾಂತೇರಿ ಜುಮಾದಿ ದೈವಕ್ಕೆ ಬಂಟ ಸಮುದಾಯದವರು ಮುಕ್ಕಾಲ್ದಿಯಾಗಿ ಸೇವೆ ಸಲ್ಲಿಸುತ್ತಾರೆ. ರಕ್ತೇಶ್ವರಿ ಹಾಗೂ ಮೂಜಿಲ್ನಾಯ ದೈವಗಳಿಗೆ ಜೈನ ಸಮುದಾಯದವರು, ಬಬ್ಬರ್ಯ ದೈವಕ್ಕೆ ಮೊಗವೀರ ಸಮುದಾಯ ಹಾಗೂ ಮಡಿವಾಳ ಸಮುದಾಯ, ಕಲ್ಕುಡ ದೈವಕ್ಕೆ ಕುಲಾಲ್ ಸಮುದಾಯದವರು ದರ್ಶನಾವೇಶಕ್ಕೆ ನಿಲ್ಲುತ್ತಾರೆ. ದೇವಾಡಿಗ ಸಮುದಾಯ ಮತ್ತು ಮಡಿವಾಳ ಸಮುದಾಯದವರೂ ಇತರೆ ದೈವಗಳ ದರ್ಶನ ಸೇವೆಯನ್ನು ಮಾಡುತ್ತಾರೆ. ಸುಳ್ಯ, ಪುತ್ತೂರು ಭಾಗಗಳಲ್ಲಿ ಬೈದ್ಯರುಗಳನ್ನು ಹೊರತುಪಡಿಸಿ ಹೆಚ್ಚಿನ ದೈವಗಳಿಗೆ ಗೌಡ ಸಮುದಾಯದವರು ದರ್ಶನಾವೇಶಕ್ಕೆ ನಿಲ್ಲುವುದು ರೂಢಿ. ವಿಟ್ಲ ಪುತ್ತೂರು ಭಾಗಗಳಲ್ಲಿ ವಾದ್ಯ ಹಿಮ್ಮೇಳಗಳಲ್ಲಿ ಜೋಗಿ ಸಮುದಾಯ ಹಾಗೂ ಮುಸ್ಲಿಂ ಸಮುದಾಯಗಳು ಭಾಗವಹಿಸುತ್ತವೆ. ಮುಂಡಾಲ ಸಮುದಾಯದ ದೈವಸ್ಥಾನದಲ್ಲಿ ಪಾಣ ಸಮುದಾಯದವರು ಕೋಲನರ್ತನವನ್ನು ಮಾಡಿದರೆ, ಉಳಿದಂತೆ ಎಲ್ಲಾ ಸೇವೆಗಳನ್ನು ಮುಂಡಾಲ ಸಮುದಾಯದವರೇ ಮಾಡುತ್ತಾರೆ. ಪ್ರತಿಯೊಂದು ಸಮುದಾಯದಲ್ಲಿರುವ ಗುರಿಕಾರನ ಮೂಲಕ ಎಲ್ಲಾ ಕೆಲಸ ಕಾರ್ಯಗಳು ಹಂಚಲ್ಪಡುತ್ತದೆ.

ಪಾಡ್ದನಗಳು ದೈವಾರಾಧನೆಯ ಮೂಲ ಆಕರಗಳಾಗಿವೆ. ಇದರಲ್ಲಿ ದೈವಗಳ ಚರಿತ್ರೆ, ಪ್ರಸರಣೆ ಕುರಿತಂತೆ ಚಿತ್ರಣಗಳು ಸಿಗುತ್ತವೆಯೇ ಹೊರತು ದೈವಗಳ ಆರಾಧನಾ ನೆಲೆಗಳಲ್ಲಿ ಕಂಡುಬರುವ ಪ್ರಾದೇಶಿಕ ಭಿನ್ನತೆಗಳ ಕುರಿತು ಮಾಹಿತಿ ಸಿಗುವುದಿಲ್ಲ. ದೈವಾರಾಧನೆಯು ಒಂದು ಪ್ರದೇಶದ ಭೌಗೋಳಿಕ ಸನ್ನಿವೇಶ, ಆರ್ಥಿಕತೆ, ಪ್ರಭುತ್ವ, ಬೀಡು, ಗುತ್ತು, ಬರ್ಕೆಗಳಿಗಿರುವ ಸಾಮಾಜಿಕ ಸ್ಥಾನಮಾನಗಳಿಂದ ನಿರ್ಧಾರಿತವಾಗುವುದರಿಂದ ಪ್ರಾದೇಶಿಕವಾರು ವಿಶಿಷ್ಟತೆಯನ್ನು ಹೊಂದಿದೆ. ಇಂದು ಕೆಲವೊಂದು ದೈವಾರಾಧನಾ ಕ್ಷೇತ್ರಗಳು ಸರಕಾರದ ಸುಪರ್ದಿಗೆ ಒಳಪಟ್ಟಿರುವುದರಿಂದ ಒಂದು ಕಾಲದಲ್ಲಿ ಮಹತ್ವವನ್ನು ಪಡೆದುಕೊಂಡ ಗುತ್ತು, ಬರ್ಕೆ ಹಾಗೂ ಇನ್ನಿತರ ಮನೆತನಗಳ ಸ್ಥಾನಮಾನಗಳಿಗೆ ಕುಂದುಂಟಾಗಿವೆ. ದೈವಾರಾಧನೆಯ ಕಟ್ಟುಕಟ್ಟಳೆಗಳಲ್ಲಿ ಮೂಲ ಪರಂಪರೆಗಳು ಬದಲಾವಣೆಯಾಗದಿದ್ದರೂ, ಸಂಪ್ರದಾಯಗಳು ಬದಲಾವಣೆಯಾಗುತ್ತಿವೆ. ಅದ್ದೂರಿ, ಅತಿ ವಿಜೃಂಭಣೆಯ ಆಚರಣೆಗಳಿಂದ ಮೂಲ ಆಚರಣೆಗಳು ಮೌಲ್ಯಗಳನ್ನು ಕಳೆದುಕೊಳ್ಳುತ್ತಿವೆ. "ನಾಗನಡೆ, ಬಲಿಪ ಬಾಯಿ, ಸರ್ಪ ಮಂಡೆ, ಪಂಚವರ್ಣದ ಮಣ್ಣ್, ತುಳುನಾಡ್‌ದ ತುಳು ಜನಕೊಲು ಮಹಾಶೇಷನ

ಜಿಡೆಟ್ಟ್ ಇತ್ತಿನ ಮಾಣಿಕ್ಯದ ಕಲ್ಲ್" ಎಂಬುವುದಾಗಿ ತುಳುನಾಡನ್ನು, ತುಳುವರನ್ನು ಕುರಿತು ನಮ್ಮ ಹಿರಿಯರು ವರ್ಣನೆ ಮಾಡಿದ್ದಾರೆ. ಇಂತಹ ತುಳುನಾಡಿನ ಪ್ರಮುಖ ಆರಾಧನಾ ಪದ್ಧತಿಯಾದ ದೈವಾರಾಧನೆಯಲ್ಲಿ ಮೂಲ ಪರಂಪರೆಗೆ, ಸಂಸ್ಕೃತಿಗೆ ಧಕ್ಕೆಯಾಗದಿರಲಿ. ಬಹುಶ: ಜಾತಿ ಮತ ಪಂಥಗಳನ್ನು ಮೀರಿದ ಒಂದು ವಿಶಿಷ್ಟ ಆರಾಧನಾ ಪರಂಪರೆಯೆಂದರೆ ಅದು ತುಳುನಾಡಿನ ದೈವಾರಾಧನೆ ಎಂದರೆ ತಪ್ಪಾಗಲಾರದು.

## ಪರಾಮರ್ಶನ ಗ್ರಂಥಗಳು :

೧. ಮೋಹನಕೃಷ್ಣ ರೈ. ಕೆ., ತುಳು ಸಂಸ್ಕೃತಿ ಚತುರ್ಮುಖಿ ಅಧ್ಯಯನ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೯.

೨. ಪಾದೂರು ಗುರುರಾಜ ಭಟ್., ತುಳುನಾಡು, ಪಾದೂರು ಗುರುರಾಜ ಭಟ್ ಮೆಮೋರಿಯಲ್ ಟ್ರಸ್ಟ್ (ರಿ.), ಉಡುಪಿ, ೨೦೦೯.

೩. ಬಾರ್ಕೂರು ಉದಯ., ಇತಿಹಾಸದ ಶೋಧ ಗತದ ಹುಡುಕಾಟ ತುಳು ಸಂಸ್ಕೃತಿ ಚರಿತ್ರೆ ಕಥನ, ಆಕೃತಿಆಶ್ರಯ ಪಬ್ಲಿಕೇಶನ್ಸ್, ಮಂಗಳೂರು, ೨೦೧೫.

೪. ಮೋಹನಕೃಷ್ಣ ರೈ. ಕೆ., ತುಳುನಾಡು ಕನ್ನಡನುಡಿ ತುಳು ಕರ್ನಾಟಕದ ನಾಡು ನುಡಿ ಚಿಂತನೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೨.